## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 19-01-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮೈಸೂರು ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

### ಹವಾಮಾನದ ಮುನ್ಸೂಚನೆ (20–01–2024 ರಿಂದ 24–01–2024)

| Parameters | 20.01.2024 | 21.01.2024 | 22.01.2024 | 23.01.2024 | 24.01.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 34 | 34 | 33 | 33 | 33 |
| ಕನಿಷ್ಠ ಉಷ್ಣಾಂಶ ($^0$ಸೆ) | 15 | 14 | 13 | 13 | 13 |
| ಮೋಡ (ಆಕ್ಟ್‌ಸ್) | 1 | 1 | 0 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 89 | 83 | 81 | 82 | 77 |
| ಕನಿಷ್ಠ ಗಾಳಿಯ ತೇವಾಂಶ (%) | 36 | 41 | 35 | 28 | 29 |
| ಗಾಳಿಯ ವೇಗ (ಕಿ.ಮೀ/ಗಂಟೆ) | 8 | 8 | 10 | 10 | 9 |
| ಗಾಳಿಯ ದಿಕ್ಕು (ಡಿಗ್ರಿ) | 120 | 120 | 110 | 120 | 115 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಮೈಸೂರು ಜಿಲ್ಲೆಯಲ್ಲಿ ದಿನಾಂಕ: 20–01–2024 ರಿಂದ 24–01–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಮಳೆ ಬರುವ ಸಂಭವವಿಲ್ಲ. ಗರಿಷ್ಠ ಉಷ್ಣಾಂಶ 33–34 °C ಮತ್ತು ಕನಿಷ್ಠ ಉಷ್ಣಾಂಶ 13–15 °C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ. 77–89 % ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 28–41 % ವರೆಗೆ ಮತ್ತು ಗಾಳಿಯು ಗಂಟೆಗೆ 8–10 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

### ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

ಜನವರಿ ತಿಂಗಳಿನಲ್ಲಿ ಬೆಳೆಯಬಹುದಾದ ಬೆಳೆಗಳು:
ಟೊಮೆಟೊ, ಬದನೆಕಾಯಿ, ಮೆಣಸಿನಕಾಯಿ, ಕುಂಬಳಕಾಯಿ ಸೌತೆಕಾಯಿ, ಹಾಗಲಕಾಯಿ, ಕಲ್ಲಂಗಡಿ, ಬೆಂಡಿ, ಅವರೆ, ಮೂಲಂಗಿ, ಕ್ಯಾರೆಟ್, ಇತ್ಯಾದಿ..

- ಕಟಾವು ಮಾಡಿದ ದವಸ ಧಾನ್ಯಗಳನ್ನು ಚೆನ್ನಾಗಿ ಒಣಗಿಸಿ ಹೆಚ್ಚು ದಿನ ಕೆಡದಂತೆ ಇಡಲು ಏಕದಳ ಧಾನ್ಯಗಳ ತೇವಾಂಶ ಶೇಕಡ 11 ರಿಂದ 12ರಷ್ಟು, ದ್ವಿದಳ ಧಾನ್ಯಗಳ ತೇವಾಂಶ ಶೇಕಡ 9 ರಷ್ಟು, ಎಣ್ಣೆಕಾಳುಗಳ ತೇವಾಂಶ ಶೇಕಡ 8 ರಷ್ಟು ಮತ್ತುತರಕಾರಿ ಬೀಜಗಳ ತೇವಾಂಶ ಶೇಕಡ 5 ರಿಂದ 6 ರಷ್ಟು ಇರಬೇಕು.

- ಭತ್ತದ ಕಟಾವಿನ ನಂತರ ಗದ್ದೆಗಳಲ್ಲಿರುವ ತೇವಾಂಶದ ಉಪಯೋಗ ಪಡೆಯಲು ದ್ವಿದಳ ಧಾನ್ಯಗಳಾದ ಹೆಸರು, ಅಲಸಂದೆ, ಉದ್ದನ್ನು ಬೆಳೆಯಬಹುದು.
- ಕಟಾವಿನ ನಂತರ ಕಡಿಮೆ ತೇವಾಂಶವಿದ್ದು ಯಾವುದೇ ಬೆಳೆಗಳನ್ನು ಬೆಳೆಯಲಾಗದ ಭತ್ತದ ಗದ್ದೆಗಳಲ್ಲಿ ಗದ್ದೆಗಳನ್ನು ಹಾಗೇ ಬಿಡದೆ

| | | |
|---|---|---|
| ಮಾಗಿ ಉಳುಮೆ ಮಾಡಿ. ಇದರಿಂದ ಮುಂದಿನ ಬೆಳೆಗೆ ರೋಗ ಹಾಗೂ ಕೀಟಗಳ ಭಾದೆ ಕಡಿಮೆಯಾಗುವುದು. ಮಳೆಯ ನೀರು ಭೂಮಿಯಲ್ಲಿ ಇಂಗುವುದು. | | |
| ಅವರೆ | ಕಾಯಿ ಕೊರಕ | • ಗಿಡ ಹೂವಾಡುವ ಹಂತದಲ್ಲಿ 5 ಮಿ.ಲೀ ಬೇವಿನ ಎಣ್ಣೆಯನ್ನು ಪ್ರತಿ ಲೀಟರ್ ನೀರಿನೊಂದಿಗೆ ಬೆರೆಸಿ ಸಿಂಪರಣೆ ಮಾಡಬೇಕು.<br>• ಎಕರೆಗೆ 5 ರಂತೆ ಮೋಹಕ ಬಲೆಗಳನ್ನು ಹಾಕಬೇಕು.<br>• ಕಾಯಿ ಕೊರಕದ ಬಾಧೆಕಂಡು ಬಂದಾಗಕ್ವಿನಾಲ್‌ಫಾಸ್ 25 ಇ.ಸಿ ಅನ್ನು 2 ಮಿ.ಲೀ. ಪ್ರತಿ ಲೀಟರ್ ನೀರಿಗೆಅಥವಾ ಫೆನ್ವಲರೇಟ್ 20 ಇ.ಸಿ ಅನ್ನು 3 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| ಕುಂಬಳಕಾಯಿ ಮತ್ತು ಸೌತೆಕಾಯಿ | ಬೂಜು ರೋಗ ಹಾಗೂ ಬೂದಿ ರೋಗ | **ಬೂಜು ರೋಗ:** ಮೊದಲಿಗೆ ಕೋನಾಕಾರದ ಹಳದಿ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ಅವು ಒಂದಕ್ಕೊಂದು ಸೇರಿಕೊಂಡು, ಎಲೆಗಳು ಒಣಗುತ್ತವೆ. ಮೆಟಲಾಕ್ಸಿಲ್+ಮ್ಯಾಂಕೋಜೆಬ್@ 2 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>**ಬೂದಿ ರೋಗ:** ಮೊದಲಿಗೆ ಸೂಕ್ಷ್ಮಗಾತ್ರದ, ಬಿಳಿ ಬೂದು ಬಣ್ಣದ ಚುಕ್ಕೆಗಳು ಎಲೆ ಮತ್ತು ಕಾಂಡಗಳ ಮೇಲೆ ಕಾಣಿಸುತ್ತವೆ. ರೋಗದ ತೀವ್ರತೆ ಹೆಚ್ಚಾದಾಗ ಎಲೆಗಳು ಪೂರ್ತಿ ಒಣಗುತ್ತವೆ. ಕಾರ್ಬೆಂಡಜಿಂ @ 1 ಗ್ರಾಂ/ಲೀ. ನೀರಿಗೆ, (180 ಗ್ರಾಂ/ಎಕರೆಗೆ.) ಅಥವಾ ಡೈನೊಕಾಪ್ 1.5 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>ಪ್ರತಿ ಎಕರೆಗೆ 200 ಲೀಟರ್ ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. 2 ವಾರಗಳ ಅಂತರದಲ್ಲಿ ತಿಳಿಸಿದ ಶಿಲೀಂಧ್ರ ನಾಶಕದ ದ್ರಾವಣದಿಂದ ಮೂರು ಸಾರಿ ಸಿಂಪಡಿಸಬೇಕು. |
| ಕಬ್ಬು | ತರಗು ನಿರ್ವಹಣೆ | ಕಬ್ಬು ಕಟಾವು ಮುಗಿದ ಮೇಲೆ ಗರಿ ಅಥವಾ ತರಗನ್ನು ಜಮೀನಿನಲ್ಲೆ ಪರ್ಯಾಯ ಸಾಲುಗಳಲ್ಲಿ ಹರಡಿ ನೀರು ಹಾಯಿಸಿ, ಎಕರೆಗೆ 15 ಕಿ. ಗ್ರಾಂ ಯೂರಿಯವನ್ನು ಬೆರಸಿದ ಶೇ. 5ರ ಸಗಣಿ ಬಗ್ಗಡವನ್ನು ಚಿಮುಕಿಸುವುದು.<br>ಪ್ಲೋರೋಟಸ್ ಸೂಕ್ಷ್ಮಾಣು ಜೀವಿಯನ್ನು ಎಕರೆಗೆ 4 ಕಿ. ಗ್ರಾಂ ಪ್ರಮಾಣದಲ್ಲಿ ಅಥವಾ ಎಕರೆಗೆ 1– 1.5 ಟನ್ ಸಕ್ಕರೆ ಕಾರ್ಖಾನೆ ಮಡ್ಡಿಗೊಬ್ಬರ ಹರಡುವುದರಿಂದ ತರಗನ್ನು ತ್ವರಿತವಾಗಿ ಕಳೆಯಿಸಬಹುದು. |
| ತೆಂಗು | ರುಗೋಸ್ ಬಿಳಿ ನೊಣ | ಬಿಳಿ ನೊಣಗಳು ಎಲೆಗಳ ಕೆಳಭಾಗದಲ್ಲಿ ರಸವನ್ನು ಹೀರುತ್ತವೆ. ಹೆಚ್ಚು ರಸಹೀರುವುದರಿಂದ ಸಿಹಿಯಾದದ್ರವ್ಯವನ್ನು ಹೊರಹಾಕುತ್ತದೆ, ಇದು ಕಪ್ಪು ಶಿಲೀಂಧ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಸಸ್ಯದ ದ್ಯುತಿಸಂಶ್ಲೇಷಣೆ ಮೇಲೆ ಪರಿಣಾಮ ಬೀರುತ್ತದೆ.<br>2.5% ಮೈದಾ ಪೇಸ್ಟ್ ದ್ರಾವಣವನ್ನು ಡಿಟರ್ಜೆಂಟ್/ಖಾದಿ ಸೋಪ್ @ 5 ಗ್ರಾಂ/ಲೀ ನೊಂದಿಗೆ ಬೆರೆಸಿ ಸಿಂಪಡಿಸುವ ಮೂಲಕ ಎಲೆಯ ಮೇಲ್ಮೈಯಲ್ಲಿ ಕಪ್ಪು ಶಿಲೀಂಧ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಹೊರಹಾಕಬಹುದು. ಹೆಚ್ಚು ಹಾನಿಯಾದಲ್ಲಿ, ಬೇವಿನ ಎಣ್ಣೆ 0.5% ಅಥವಾ NSKE 5% ಅನ್ನು ಸಿಂಪಡಿಸುವುದು. |

- ಬೆಳಗಿನ ಜಾವ ಹಾಗೂ ರಾತ್ರಿ ವೇಳೆ ಉಷ್ಣಾಂಶದಲ್ಲಿ ಸ್ವಲ್ಪ ಇಳಿತವಿರುವುದರಿಂದ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ವಿದ್ಯುತ್ ಬಲ್ಬ್ ಅನ್ನು ಒದಗಿಸುವ ಮೂಲಕ ಕಾಪಾಡಿಕೊಳ್ಳುವುದು.
- ಎರೆಹುಳು ಸಾಕಾಣಿಕೆ ಘಟಕದಲ್ಲಿ ಹೆಚ್ಚಿನ ತೇವಾಂಶ ಇರದಂತೆ ಎಚ್ಚರಿಕೆ ವಹಿಸಬೇಕು. ಎರೆಕುಣಿಗಳಲ್ಲಿ ಎರೆಗೊಬ್ಬರ ಉತ್ಪಾದನೆಯಾಗುವವರೆಗೆ ಶೇ. 60–70 ರಷ್ಟು ತೇವಾಂಶ ಇರುವ ಹಾಗೆ ನೋಡಿಕೊಳ್ಳಬೇಕು.

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನುಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು